

ಆಗ ನಾನು ಲಾಸ್ ಏಂಜಲೀಸ್‌ನ ಕ್ಯಾಲ್‌ಟೆಕ್ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದೆ. ಆ ದಿನ ಶನಿವಾರ. ಬೆಳಿಗ್ಗೆಯಿಂದ ಓದಿ, ಮನಸ್ಸೆಲ್ಲಾ ಸುಸ್ತಾಗಿತ್ತು. ಹಾಗೆಯೇ ಬೇರೆ ಯಾವುದಾದರೂ ರೂಮಿಗೆ ಹೋಗಿ, ಸ್ವಲ್ಪ ಹರಟೆ ಹೊಡೆದು ಬರೋಣವೆಂದುಕೊಂಡು ಡಾಮರ್‌ನ ಹಾಲ್‌ವೇನಲ್ಲಿ ಹೋಗುತ್ತಿದ್ದೆ. ಬಹುತೇಕ ರೂಮುಗಳ ಬಾಗಿಲು ಮುಚ್ಚಿದ್ದವು; ಶನಿವಾರವಾದ್ದರಿಂದ ಆ ಸಂಜೆಯಲ್ಲಿ ಪಾರ್ಟಿ ಮಾಡುತ್ತಿರಬೇಕೆಂದುಕೊಂಡೆ. ಸ್ವಲ್ಪ ಮುಂದೆ ಹೋಗುವಷ್ಟರಲ್ಲಿ ತನ್ನ ರೂಮಿನಿಂದ ರಾಹುಲ್ ಹೊರ ಬರುತ್ತಿದ್ದ. ನನ್ನನ್ನು ನೋಡಿದ ಕೂಡಲೇ ಅವನ ಮುಖ ಅರಳಿತು.

'ಹೇ ಸ್ಮಿತಾ, ಪಾರ್ಟಿಗೆ ಹೋಗುತ್ತಿದ್ದಿಯಾ?' ಎಂದು ಕೇಳಿದ.

ನಾನು, 'ಇಲ್ಲ ಕಣೋ, ಓದಿ ಓದಿ ಬೋರ್ ಆಯಿತು' ಅಂತ ಹೇಳಿದೆ. ಅದಕ್ಕವನು, 'ನನಗೂ ಬೋರ್ ಆಗ್ತಿದೆ. ಬಾರೇ ಒಳಕ್ಕೆ' ಎಂದು ಹೇಳಿ ನನ್ನನ್ನು ಅವನ ರೂಮಿನೊಳಗೆ ಕರೆದೊಯ್ದ. ಅವನು ತನ್ನ ಹಾಸಿಗೆಯ ಮೇಲೆ ಕುಳಿತ, ನಾನು ಅವನ ಕುರ್ಚಿಯಲ್ಲಿ ಆಸೀನಳಾದೆ. ಏನು ಮಾತನಾಡಲೂ ತಿಳಿಯದೆ, ಏನೋ ವಿಶೇಷ ಎಂದು ಕೇಳಿದೆ. ಆಗವನ ಕಣ್ಣುಗಳು ಕಾಂತಿಯಿಂದ ಹೊಳೆಯಲಾರಂಭಿಸಿದವು. ಇವತ್ತು ನನ್ನ ಹುಟ್ಟಿದ ಹಬ್ಬ ಕಣೇ! ಎಂದು ಉತ್ಸಾಹದಿಂದ ಹೇಳಿದ. ಅವನ ಕೈಕುಲುಕಿ, ಶುಭಾಶಯಗಳನ್ನು ಅರ್ಪಿಸಿದೆ. ಅವನ ಮನೆ ಕ್ಯಾಂಪಸ್ಸಿನಿಂದ ಬಹಳ ದೂರದಲ್ಲಿರಲಿಲ್ಲ ಎಂಬು ದಿಢೀರನೆ ನೆನಪಾಗಿ, ಕ್ಯಾಶುಯಲ್ಲಾಗಿ ಕೇಳಿದೆ: ಮನೆಗೆ ಯಾಕೆ ಹೋಗಲಿಲ್ಲವೋ? ಇಲ್ಲಿ ಕೂತು ಏನು ಮಾಡ್ತಿದೀಯ? ಅದಕ್ಕವನು ಸ್ವಲ್ಪ ಯೋಚಿಸಿದಂತೆ ಮಾಡಿ, ಈ ವಾರವೇ ನಾನು ಯಾವುದೋ ಒಂದು ಪ್ರಾಜೆಕ್ಟ್ ರಿಪೋರ್ಟ್ ಮಾಡಿ ಮುಗಿಸಬೇಕಿತ್ತು ಎಂದು ಹೇಳಿದ. ಅವನು ಹೇಳಿದ ರೀತಿಯನ್ನು ನೋಡಿಯೇ, ನನಗೇಕೋ ಅನುಮಾನ ಮೂಡಿತು. ಅದನ್ನು ತೋರಿಕೊಳ್ಳದೆಯೇ, ಸಹಜವಾಗಿ ಕೇಳಿದೆ: ನಿಮ್ಮ ಅಪ್ಪ ಅಮ್ಮನ ಹತ್ತಿರವಾದರೂ ಮಾತನಾಡಿದೆಯ? ಆಗ ಅವನು, ಅಮ್ಮ ಕಾಲ್ ಮಾಡಿ ಹ್ಯಾಪೀ ಬರ್ತ್ ಡೇ ವಿಶ್ ಮಾಡಿ ಮೆಸೇಜ್ ಬಿಟ್ಟರು. ನೀನು ಅವರು ಬಿಟ್ಟ ಸಂದೇಶವನ್ನು ಕೇಳಲೇ ಬೇಕು ಎಂದು ಆಗ್ರಹಿಸಿ, ತನ್ನ ಫೋನಿನಲ್ಲಿ ಅವರ ಅಮ್ಮ ಬಿಟ್ಟಿದ್ದ ದೀರ್ಘವಾದ ವಾಯ್ಸ್ ಮೆಸೇಜನ್ನು ನನಗೆ ಕೇಳಿಸಿಬಿಟ್ಟ: ಮೊದಲಿಗೆ ಅವರ ಧ್ವನಿ ಸಹಜವಾಗಿತ್ತು. ನಂತರ ಕೋಪ ಮತ್ತು ಅಸಹನೆಯಿಂದ ಕೂಡಿದ ಮಾತುಗಳಲ್ಲಿ, ಅವರು ಆತನ ಅಮ್ಮ ಎಂದು ಕನಿಷ್ಠ 56 ಬಾರಿಯಾದರೂ ಜ್ಞಾಪಿಸಿರಬೇಕು. ಕೊನೆಯಲ್ಲಿ ಅವರ ಮಾತು ಮತ್ತೆ ಸಹಜವಾಯಿತು. ಅದನ್ನು ಕೇಳಿದ ನನಗೆ, ಒಂದು ಬಗೆಯ ವಿಚಿತ್ರ ಅನುಭವವಾಯಿತು.

ಯಾವುದೇ ತಾಯಿಗೆ ನೀನು ನನ್ನ ಮಗ ಎಂದು (ಅಷ್ಟೊಂದು ಸಲ) ನೆನಪಿಸುವ ಅಗತ್ಯ ಅಥವಾ ಅನಿವಾರ್ಯತೆ ಏಕಿರುತ್ತದೆ ಎಂದು ತಿಳಿಯಲಿಲ್ಲ. ನನ್ನ ಮತ್ತು ಅವನ ಮಧ್ಯೆ ಸಲಿಗೆಯಿದ್ದುದರಿಂದ, ನಾನವನಿಗೆ ಅದೇ ಪ್ರಶ್ನೆಯನ್ನು ಕೇಳಿದೆ. ಅಲ್ಲಿಯವರೆಗೆ ಸಮಾಧಾನನಿಂದ ಮತ್ತು ಗೆಲುವಿನಿಂದ ಮಾತಾಡುತ್ತಿದ್ದವನು, ಥಟ್ಟೆಂದು ಗಂಭೀರನಾದ. ಮರು ಕ್ಷಣವೇ ಎಲ್ಲಿಲ್ಲದ ದುಃಖ ಉಮ್ಮಳಿಸಿ ಬಂದು ಅಳಲು ಶುರು ಮಾಡಿದ. ನಾನು ಎದ್ದು ಹೋಗಿ ಅವನನ್ನು ಸಂತೈಸಲು ಶುರು ಮಾಡಿದೆ. ಮನಸ್ಸಿನ ಮೇಲೆ ಪುನರ್ ನಿಯಂತ್ರಣ ಸಾಧಿಸಲು ಅವನಿಗೆ ಹತ್ತು ನಿಮಿಷಗಳೇ ಬೇಕಾದವು. ಎದ್ದು ಹೋಗಿ ಮುಖ ತೊಳೆದುಕೊಂಡು ಬಂದು ಹಾಸಿಗೆಯ ಮೇಲೆ ಕುಳಿತ. ತನ್ನ ಜೀವನದ ಕಥೆಯನ್ನು ಇದುವರೆಗೆ ಯಾರಲ್ಲಿಯೂ ಹೇಳಿಲ್ಲ, ಇದನ್ನು ಗೌಪ್ಯವಾಗಿ ಇಟ್ಟುಕೊಳ್ಳಬೇಕೆಂದು ವಚನವನ್ನು ತೆಗೆದುಕೊಂಡ ಮೇಲೆಯೇ, ತನ್ನ ಬಾಳ ಕಥೆಯನ್ನು ಸುದೀರ್ಘವಾಗಿ ಹೇಳಲಾರಂಭಿಸಿದ. ಕಥೆಯನ್ನು ಎಷ್ಟೊಂದು ನಿರ್ಲಿಪ್ತವಾಗಿ ಹೇಳಿದನೆಂದರೆ, ಅದು ಬೇರೆಯೊಬ್ಬರ ಜೀವನದಲ್ಲಿ ನಡೆಯಿತು ಎನ್ನುವಷ್ಟರಮಟ್ಟಿಗೆ!

ಆಗ ರಾಹುಲನಿಗೆ 9 ವರ್ಷ, ಅವನ ತಂಗಿ ರೇಷ್ಮಳಿಗೆ 4 ವರ್ಷ. ಅವರಿಬ್ಬರೂ ತಮ್ಮ ತಂದೆ ನೀರಜ್ ಮತ್ತು ತಾಯಿ ನೇಹ ಜೊತೆ ಪಾಸಡೀನದಲ್ಲಿ ಬೆಳೆಯುತ್ತಿದ್ದರು. ತಂದೆ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರೆ, ತಾಯಿ ಒಂದು ಹಣಕಾಸಿನ ಸಂಸ್ಥೆಯನ್ನು ನಡೆಸುತ್ತಿದ್ದಳು. ನೀರಜ್ ಮತ್ತು ನೇಹ  ಇಬ್ಬರೂ ಗುಜರಾತಿ ಮೂಲದವರು, ಪರಸ್ಪರ ಪ್ರೀತಿಸಿ ಮದುವೆಯಾದವರು. ಅಮೆರಿಕಕ್ಕೆ ವಲಸೆ ಬಂದು ಆಗಲೇ 12 ವರ್ಷಗಳಾಗಿತ್ತು. ನೀರಜ್ ತನ್ನ ತಂದೆ ತಾಯಿಯರನ್ನು ತಮ್ಮ ಮನೆಯಲ್ಲಿಯೇ ಇಟ್ಟುಕೊಂಡು ನೋಡಿಕೊಳ್ಳುತ್ತಿದ್ದ. ಇದು ನೇಹಾಳಿಗೆ ನುಂಗಲಾರದ ತುತ್ತಾಗಿತ್ತು. ಅವರ ದೆಸೆಯಿಂದ ನೇಹ ಯಾವಾಗಲೂ ಗಂಡನ ಮೇಲೆ ವಿನಾಕಾರಣ ಜಗಳವಾಡುತ್ತಲೇ ಇರುತ್ತಿದ್ದಳು. ಹೀಗೊಂದು ಸಲ ನೀರಜ್ ತನ್ನ ಕಚೇರಿ ಕೆಲಸದ ಮೇಲೆ ನ್ಯೂಯಾರ್ಕ್‌ಗೆ ಹೋದಾಗ, ಆ ಸಮಯವನ್ನು ಉಪಯೋಗಿಸಿಕೊಂಡು ಅತ್ತೆ ಮಾವನನ್ನು ಮನೆಯಿಂದ ಒದ್ದು ಹೊರಗೆ ಹಾಕಿಬಿಟ್ಟಳು. ಆದರೆ ಅವರ ಪುಣ್ಯ ವಿಶೇಷವೇ ಸರಿ, ಈ ಸುದ್ದಿ ತಿಳಿದ ಕೂಡಲೇ ಕಿರಿ ಮಗಳು ಬಂದು, ಅವರನ್ನು ಹತ್ತಿರದ ಊರಾದ ತನ್ನ ಮನೆಗೆ ಕರೆದುಕೊಂಡು ಹೋದಳು. ಸದ್ಯ ಬೀದಿಪಾಲು ಆಗಬೇಕಿದ್ದ ಅವಘಡ ತಪ್ಪಿತು. ಟೂರ್ ಮುಗಿಸಿಕೊಂಡು ಮನೆಗೆ ಬಂದ ನೀರಜ್ ವಿಷಯ ತಿಳಿದು ಕ್ರೋಧನಾದ. ನೇಹಳ ಮುಂದೆ ಎಗರಾಡಿದ. ಆದರೆ ನೇಹ ತುಂಬಾ ಬಲವಾದ್ದರಿಂದ ಅವನ ಮಾತು ಏನೂ ನಡೆಯದಾಯಿತು!